ಗಳನ್ನು ಕಟ್ಟಿಸಲು ಈ ಯೋಜನೆಯಲ್ಲಿ ಅವಕಾಶಮಾಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಮನೆ ಕಟ್ಟಿಕೊಳ್ಳಬೇಕೆಂದು ಬಂದರೆ ಈ ಸ್ಕೀಮಿನಲ್ಲಿ ಅವಕಾಶವಿದೆ.

ಶ್ರೀ ಎಸ್. ಗೋಪಾಲಗೌಡ —ಹಾಗಲ್ಲ. ಒಂದು ಊರಿನಲ್ಲಿ ಆಸ್ಪತ್ರೆಯಿರುತ್ತದೆ, ಡಾಕ್ಟರಿಗೆ ವಾಸಕ್ಕೆ ಮನೆಯಿರುವುದಿಲ್ಲ. ಅಂಥ ಸ್ಥಳಗಳೆಷ್ಟಿವೆಯೆಂಬುದನ್ನು ನೋಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದವರು ಬೇಕಾದರೆ ಕಟ್ಟಿಸಬಹುದು. ಅದಕ್ಕೆ ಈ ಸ್ಕೀಮು ಅನ್ವಯಿಸುವುದಿಲ್ಲ.

Kanva Reservoir (Feeding from Mari Halla).

Q.—234. Sri V. VENKATAPPA (Channapatna).—

Will the Government be pleased to state :—

(*a*) whether it is not a fact that the Government have approved of the scheme for feeding Kanva Reservoir from Mari Halla ;

(*b*) what is the preliminary estimate of the scheme;

(*c*) whether the final estimate is made and when the work will be taken up ?

A.—Sri H. M. CHANNABASAPPA (Minister for Industries).—

(*a*) No.

(*b*) Rs. 5·5 lakhs.

(*c*) Not yet; the question of taking up the work will arise after the final estimate is prepared and sanctioned.

ಶ್ರೀ ವಿ. ವೆಂಕಟಪ್ಪ.—ಈ ವಿಚಾರದಲ್ಲಿ ಒಂದು ಗೆಜೆಟ್ ನೋಟಿಫಿಕೇಷನ್ ಆಗಿ ರೈತರು ಹೆಚ್ಚಾಗಿ ಕಾಂಟ್ರಿಬ್ಯೂಷನ್ ಮತ್ತು ವಾಟರ್ ರೇಟ್ ಕೊಡುವುದಕ್ಕೆ ಮುಚ್ಚಳಿಕೆ ಬರೆದುಕೊಡಬೇಕೆಂದು ಕೇಳಿಲ್ಲವೇ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಕೇಳಿದೆ.

ಶ್ರೀ ವಿ. ವೆಂಕಟಪ್ಪ.—ಮೊದಲನೆಯ ಪ್ರಶ್ನೆಯಲ್ಲಿ ಸರ್ಕಾರ ಅನುಮೋದಿಸಿಲ್ಲವೇ ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳಿರುವುದೇಕೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮ್ಮ ಪ್ರಶ್ನೆ

> "whether it is not a fact that the Government have approved of the scheme for feeding Kanva Reservoir from Mari Halla"

ಎಂಬುದಾಗಿರುವುದರಿಂದ ಅದು approve ಆಗಿಲ್ಲವೆಂದು ಹೇಳಿದೆ.

ಶ್ರೀ ವಿ. ವೆಂಕಟಪ್ಪ.—Approve ಆಗದೆ ಗೆಜೆಟ್ ನೋಟಿಫಿಕೇಷನ್ ಮಾಡುತ್ತಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಗೆಜೆಟ್ ನೋಟಿಫಿಕೇಷನ್ ಮಾಡಿ ರೈತರು ಹೆಚ್ಚಾದ ಕಾಂಟ್ರಿಬ್ಯೂಷನ್ ಮತ್ತು ವಾಟರ್ ರೇಟ್ ಕೊಡಲು ಒಪ್ಪುವರೇ, ಅವರಿಗೆ ಸಾಧ್ಯವೇ, ತಕರಾರೇನಾದರೂ ಇದೆಯೇ ಎಂದು ವಿಚಾರಿಸಿ ಆಮೇಲೆ ನಾವು ಮುಂಜೂರು ಮಾಡಬೇಕು.

ಶ್ರೀ ವಿ. ವೆಂಕಟಪ್ಪ.—ಹಾಗಾದರೆ ಮುಂಜೂರು ಮಾಡುವುದಕ್ಕೇನು ಕಾರ್ಯಕ್ರಮ ಕೈಕೊಳ್ಳಲಾಗಿದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮುಂಜೂರಾಗುವುದಕ್ಕೆ ಕೆಲವು ತೊಂದರೆಗಳಿವೆ. ರೈತರು ಕಾಂಟ್ರಿಬ್ಯೂಷನ್ ಮತ್ತು ವಾಟರ್ ರೇಟ್ ಕೊಡುವುದಿಲ್ಲವೆಂದು ತಕರಾರು ಮಾಡಿರುವುದು ಒಂದು ಕಾರಣ. ಮತ್ತೊಂದು ಅರ್ಕಾವತಿ ವ್ಯಾಲಿ ನೀರನ್ನು, ಅಲ್ಲಿಯೇ ಜಮೀನು ಸಿದ್ಧವಾಗಿರುವಾಗ ಅದನ್ನು ಬಿಟ್ಟು, ಇನ್ನೊಂದು ವ್ಯಾಲಿಗೆ ಡೈವರ್ಟ್ ಮಾಡುವುದು ನೀತಿಯುತವಾಗಿದೆಯೇ ಎಂಬುದನ್ನು ಪರ್ಯಾಲೋಚಿಸಬೇಕಾದ್ದು.

ಶ್ರೀ ವಿ. ವೆಂಕಟಪ್ಪ.—ಅಂದಾಜು 505 ಲಕ್ಷ ರೂಪಾಯಿಗಳಿಗೆ ತಯಾರಾಗಿರುವುದರಿಂದ ಪರ್ಯಾಲೋಚಿಸುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂದಾಜು 5·5 ಲಕ್ಷ ರೂಪಾಯಿಗಳಿಗೆ ತಯಾರಾಗಿರುವುದು, 505 ಲಕ್ಷಕ್ಕಲ್ಲ. ಅಂದಾಜು ತಯಾರಾಗಬೇಕೆಂದು ಹೇಳಿದಮೇರೆಗೆ ರಿಸರ್ವಾಯರ್‌ಗೆ ಅಂದಾಜು ಮಾಡಲಾಯಿತು. ಅದನ್ನು ಮುಂಜೂರುಮಾಡುವಾಗ ಸಾಧಕ ಬಾಧಕ, ಕಷ್ಟನಷ್ಟ ಪರಿಶೀಲಿಸಿ ಆಮೇಲೆ ಮುಂಜೂರು ಮಾಡಬೇಕು.

ಶ್ರೀ ವಿ. ವೆಂಕಟಪ್ಪ.—ಈ ಕೆಲಸ ತೆಗೆದುಕೊಳ್ಳಲು ಏರ್ಪಾಡುಮಾಡುತ್ತೀವೆ, 10 ಲಕ್ಷ ರೂಪಾಯಿಗಳು ಖರ್ಚಾದರೂ ಪರವಾಗಿಲ್ಲ ಎಂದು ಮುಖ್ಯಮಂತ್ರಿಗಳು ಹೋದನಲ ಹೇಳಲಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ನನಗೆ ಗೊತ್ತಿಲ್ಲ.

Reservoir near Thimmammanahalli (Construction).

Q.—269. Sri MALI MARIAPPA (Pavagada).—

Will the Government be pleased to state :—

(*a*) whether an estimate for constructing a reservoir near Thimmammanahalli, Nagalmadike Hobli, Pavagada Taluk is prepared ;

(*b*) whether the same is included in the Second Five-Year Plan ?

A.—Sri H. M. CHANNABASAPPA (Minister for Industries).—

(*a*) Yes.

(*b*) No.

ಶ್ರೀ ಮಾಲ ಮರಿಯಪ್ಪ.—ಅಂದಾಜನ್ನು ಎಷ್ಟು ಮೊತ್ತಕ್ಕೆ ಮಾಡಿದ್ದೀರಿ?

*ಶ್ರೀ ಎಚ್. ಎಂ. ಚನ್ನಬಸಪ್ಪ.—12 ಲಕ್ಷ ರೂಪಾಯಿಗಳಿಗೆ.